# ಸೌಂದರ್ಯದ ಉಷಾ ಕಾಲದಲ್ಲಿ ನಿಶಾ

**ಕರ್ನಾಟಕದ ಶಿಖರ, ಪುಟ್ಟ ಜಿಲ್ಲೆ ಬೀದರ್‌ನ ಹುಮಾನಾಬಾದ್ ತಾಲ್ಲೂಕಿನ ಮಿಂಚುಳ್ಳಿ ಚೆಲುವೆ ನಿಶಾ, ಫ್ಯಾಷನ್ ಲೋಕದಲ್ಲಿ ಕರ್ನಾಟಕವನ್ನು ಹೆಮ್ಮೆಯಿಂದ ಬೆಟ್ಟುಮಾಡುವಂತೆ ಮಿಂಚಿದ್ದಾರೆ. ಇಂಡೊನೇಷ್ಯಾದಲ್ಲಿ ನಡೆದ 'ಮಿಸ್ ಇಂಡಿಯಾ ಇಂಟರ್‌ನ್ಯಾಷನಲ್ ಸ್ಪರ್ಧೆ'ಯ ಕಿರೀಟ ಅವರದಾಗಿದೆ.**



■ **ಚಂದ್ರಕಾಂತ ಮಸಾನಿ**

ಸೌಂದರ್ಯ ಸ್ಪರ್ಧೆಯಲ್ಲಿ ಜಯದ ಕಿರೀಟ ಮುಡಿಗೇರಿಸಿಕೊಳ್ಳಲು ಬರೀ ಮೈಮಾಟ ಇದ್ದರೆ ಸಾಲದು, ಪ್ರತಿಭೆ, ಮಾತಿನ ಹರಿತ ಶೈಲಿ, ಉತ್ತಮ ನಡವಳಿಕೆ, ಫಿಟ್‌ನೆಸ್ ಎಲ್ಲವೂ ಮುಖ್ಯ. ಇವೆಲ್ಲವನ್ನೂ ಮೈಗೂಡಿಸಿಕೊಂಡ ನಮ್ಮ ಬೀದರ್‌ನ ಚೆಲುವೆ ನಿಶಾ ತಾಳಂಪಳ್ಳಿ ಇಂಡೊನೇಷ್ಯಾದಲ್ಲಿ ನಡೆದ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಗೆಲುವಿನ ನಗೆ ಬೀರಿದ್ದಾರೆ. ಈ ಮೂಲಕ ಫ್ಯಾಷನ್ ಲೋಕದಲ್ಲಿ ತಮ್ಮ ಅಸ್ತಿತ್ವದ ಹೆಜ್ಜೆಗುರುತು ಮೂಡಿಸಿದ್ದಾರೆ.

ಗ್ಲಾಮರಸ್ ಫೋಟೊಗಳು, ಸೌಂದರ್ಯ, ಕ್ರಮಾಂಕ ಹಾಗೂ ವೀಕ್ಷಕರ ಮತಗಳು, ಪರಿಚಯಾತ್ಮಕ ವಿಡಿಯೊ, ದೂರವಾಣಿ ಸಂದೇಶ ಎಲ್ಲವನ್ನೂ ಸಮಗ್ರವಾಗಿ ಅವಲೋಕಿಸಿ 30 ಸ್ಪರ್ಧಿಗಳಲ್ಲಿ ಒಬ್ಬರನ್ನು ಆಯ್ಕೆ ಮಾಡಲಾಗಿತ್ತು. ಇದೇ ಮಾದರಿಯಲ್ಲಿಯೇ ಇಂಡೊನೇಷ್ಯಾದಲ್ಲಿ ನಾಲ್ಕು ದಿನಗಳವರೆಗೆ ನಡೆದ ಸ್ಪರ್ಧೆಯನ್ನು ಎದುರಿಸಿ ಕೊನೆಗೆ ಕಿರೀಟವನ್ನು ತನ್ನ ಮುಡಿಗೇರಿಸಿಕೊಂಡಿರುವುದು ಅಭಿನಂದನಾರ್ಹ.

## ಸ್ಪರ್ಧೆಯಲ್ಲಿ 30 ಚೆಲುವೆಯರು!

ನಿಶಾ ತಾಳಂಪಳ್ಳಿ ಮೂಲತಃ ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಧುಮ್ಮನಸೂರು ಗ್ರಾಮದವರು. ಸಂಪ್ರದಾಯಸ್ಥ ಕುಟುಂಬದಿಂದ ಬಂದರೂ ಬಾಲ್ಯದಿಂದಲೇ ಮಾಡೆಲಿಂಗ್‌ನಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದರು.

ವಿವಿಧ ಸಂಘ ಸಂಸ್ಥೆಗಳು ಆಯೋಜಿಸಿದ ಸೌಂದರ್ಯ ಸ್ಪರ್ಧೆಗಳಲ್ಲಿ ಪಾಲ್ಗೊಂಡಾಗ ಅನೇಕ ಪ್ರಶಸ್ತಿಗಳು ಬಂದವು. ಇದರಿಂದ ರಾಷ್ಟ್ರ ಮಟ್ಟದ ಸೌಂದರ್ಯ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಪ್ರೇರಣೆ ದೊರೆಯಿತು. ಮಿಸ್ ಇಂಡಿಯಾ ಇಂಟರ್‌ನ್ಯಾಷನಲ್ ಸ್ಪರ್ಧೆಯಲ್ಲಿ